ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವುದು ಸೌಂದರ್ಯ, ಯಾವುದು ಸೌಂದರ್ಯವಲ್ಲ ಎನ್ನತಕ್ಕದ್ದಿ ಅಭಿವ್ಯಾಯದ ಮಾತು. ಸಜ್ಜಾ ಹಾಕುವುದು ಸೌಂದರ್ಯವೆಂದು ತಾವು ಹೇಳಬಹುದು, ಅದು ಆಗತ್ಯ ವೆಂದು ನಾವು ಹೇಳಬಹುದು.

SRI KAGODU THIMMAPPA.—The answer is very hypothetical. you have designed a type of building wherein you have put up a 'sajja' which under the ordinary course do not require at all. Further you are putting marbles to the walls and the steps etc., which are such that even without these things the building could be constructed and maintained But just to beautify the building you have introduced certain technical construction. Therefore I want to know the amount that was spent for these beautification works ?

SRI H. M. CHANNABASAPPA.—Architectural features and appreciation of beauty change from time to time. Only what has been provided in the estimate has been spent.

ಶ್ರೀ ಕೋಣಂದೂರು ಲಿಂಗಪ್ಪ.—ಸೌಂದರ್ಯದ ಬಗ್ಗೆ ಶ್ರೀ ಹೂನ್ ಚೆನ್ನಬಸಪ್ಪನವರ ವ್ಯಾಖ್ಯಾನ ಬಹಳ ಅಪೂರ್ವವಾದುದು. ಆದರೆ, ಸೌಂದರ್ಯಕ್ಕೆ ತಾವು ಮಾರು ಹೋಗಿ, ಈ ಸ್ಥಿತಿಯಲ್ಲಿ ರಾಜ್ಯದ ಬೊಕ್ಕಸದ ಹಣವನ್ನು ವ್ಯರ್ಥವಾಗಿ ವೆಚ್ಚ ಮಾಡುವ ಹವ್ಯಾಸವನ್ನು ಮುಂದಾದರೂ ಕೈಬಿಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಸೌಂದರ್ಯಕ್ಕೆ ಮಾರು ಹೋಗಿಲ್ಲ ಎಂದು ಹೇಳುವಾಗ, ಸೌಂದರ್ಯಕ್ಕೆ ಮಾರು ಹೋಗುವ ಪ್ರಶ್ನೆಯೇ ಬರುವುದಿಲ್ಲ.

CEILING ON URBAN PROPERTY

337. SRI JAYAPRAKASH SHETTY (Brahmavar).—Will the Chief Minister be pleased to state.

(*a*) The stage at which the Proposal to fix ceiling on Urban Property is pending.

(*b*) Whether the Government has received any direction from the Central Government in this regard ?

SRI D. DEVARAJ URS (Chief Minister).—

(*a*) and (*b*) Both Houses of the Legislature have passed a resolution under Article 252 (i) of the Constitution that the imposition of ceiling on urban property be regulated by Parliament by law.

SRI ABDUL KHUDDUS ANWAR.—Will the Government try to expedite the matter and see that the Urban Celling is brought into force ?

† SRI D. DEVARAJ URS.—It is a complicated problem and perhaps again it may have to be taken up, I don't know. Anyway it is now before the Govennent of India.

ಶ್ರೀ ಕೋಣಂದೂರು ಲಿಂಗಪ್ಪ.—ಗ್ರಾಮಾಂತರ ಪ್ರದೇಶದಲ್ಲಿ ಭೂಸುಧಾರಣೆಯನ್ನು ಜಾರಿಗೆ ತಂದು ಆಲ್ಲಿ ಒಂದು ವ್ಯವಸ್ಥೆ ಮಾಡುವ ಪ್ರಯತ್ನ ನಡೆದಿದೆ. ಹಾಗೆಯೇ ನಗರ ಪ್ರದೇಶದ ಆಸ್ತಿ ಮಿತಿ ಆದಷ್ಟು ಜಾಗ್ರತೆ ಒತ್ತಾಯ ಹೇರುತ್ತೀರಾ ?

ಶ್ರೀ ಡಿ. ದೇವ ರಾಜ ಅರಸ್.—ಒತ್ತಾಯ ಹೇರೋಣ.

ಶ್ರೀ ಬಾಪೂಗೌಡ ರಾಯಪ :—ತಾವು ಈಗಾಗಲೇ ಲ್ಯಾಂಡ್ ಸೀಲಿಂಗ್‌ನ್ನು ತಂದಿದ್ದೀರಿ. ಅದರಂತೆ ಅರ್ಬನ್ ಸೀಲಿಂಗ್ ಅನ್ನು ತೆಗೆದುಕೊಂಡು ಬರುತ್ತೀರಾ ? ಇದೂ ಸಹ ಸ್ಟೇಟ್ ಪರ್ವ್ಯೂನಲ್ಲಿ ಬರುತ್ತದೆ. ಇದನ್ನು ಸರ್ಕಾರದವರು ತೀವ್ರತೆಯಿಂದ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ್ :—ಎಲ್ಲರಿಗೂ ಯೂನಿಫಾರಂ ಆಗಿರುವುದಕ್ಕೋಸ್ಕರ ಇದನ್ನು ಕೇಂದ್ರಕ್ಕೆ ಬಿಟ್ಟುಕೊಡಬೇಕು ಎನ್ನುವ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಅದರಂತೆ ಹಿಂದೆ ಈ ಸಭೆಲ್ಲಿಯೂ ಒಂದು ನಿರ್ಣಯವನ್ನು ಸಹ ಮಾಡಿಕಳುಹಿಸಿದ್ದೇವೆ.

50 MILLS ROAD WORK PROGRAMME

631 SRI P. MUNIYAPPA (Mulbagal).—

Will the Minister for Public Works and Electricity be pleased to state :—

(*a*) The number of taluks where 50 miles road programme has been sanctioned and the number of taluks were it is incomplete,

(*b*) the number of miles of road works completed and to be completed in Mulbagal taluk and the time required for completing the 50 miles road programme in this taluk ?

SRI H. M. CANNABASAPPA (Minister for public work and Electricity

(*a*) Not completed in any of the taluks.

(*b*) Road works to the extent of 99 K. M. have been sanctioned in Mulbagal taluk. Out of this, road works to the extent of 45 K. M. are under different stages of execution. It is proposed to complete the programme in the coming years subject to availability of funds.

ಶ್ರೀ ಪಿ ಮುನಿಯಪ್ಪ :—ತಮ್ಮ ಉತ್ತರದಲ್ಲಿ, ಮುಳುಬಾಗಿಲು ತಾಲ್ಲೂಕಿನಲ್ಲಿ ೫೦ ಮೈಲಿ ಕಾಮಗಾರಿಯನ್ನು ತೆಗೆದುಕೊಳ್ಳುತ್ತೇವೆಂದು ತಿಳಿಸಿದ್ದೀರಿ. ೧೯೭೦ನೇ ಇಸವಿಯಲ್ಲಿ ತೆಗೆದುಕೊಂಡಿರುವ ಕೆಲಸಗಳು ಅರ್ಧಂಬರ್ಧ ವಾಗಿ, ಆ ರಸ್ತೆಗಳಲ್ಲಿ ಜಾನುವಾರುಗಳು ಗಾಡಿಗಳು, ಹೋಗುವುದಕ್ಕೆ ತೊಂದರೆಯಾಗಿದೆ. ಈ ಕೆಲಸಗಳನ್ನು ತಾವು ಜಾಗ್ರತೆಯಾಗಿ ತೆಗೆದುಕೊಂಡು ಪೂರೈಸುತ್ತೀರಾ.

† ಶ್ರೀ ಎಚ್. ಎಂ. ಚನ್ನಬಸಪ್ಪ :—ಸರ್ಕಾರದ ಉದ್ದೇಶ, ಸಾಧ್ಯವಾದಷ್ಟು ಬೇಗ ಈ ಕೆಲಸಗಳನ್ನು ಮಾಡಬೇಕು ಎನ್ನುತಕ್ಕದು ಇದೆ. ಹಣದ ಅಭಾವ ಇರೋಣಾದ್ದರಿಂದ ಕೆಲಸ ಕೆಲಸಗಳು ಹಾಗೆಯೇ ನಿಂತಿವೆ ಈಗಲೂ ಕೂಡ ರೂರಲ್ ಕಮ್ಯುನಿಕೇಷನ್‌ಗೆ ಸಾಕಷ್ಟು ಹಣ ಒದಗಿಸಿಲ್ಲ. ಆದ್ದರಿಂದ ನಾವು ಯಾವುದಾದರೂ ಪ್ರಯತ್ನ ಮಾಡಿ ರೂರಲ್ ಕಮ್ಯುನಿಕೇಷನ್‌ಗೆ ಆದ್ಯತೆ ಕೊಟ್ಟು ಹಣವನ್ನು ಒದಗಿಸಬೇಕು ಎಂದು ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ಬಿ. ರಾಮಸ್ವಾಮಿ :—ತಮ್ಮ ೫೦ ಮೈಲಿ ಪ್ರೋಗ್ರಾಂನಲ್ಲಿ ಎಲ್ಲಿಯೂ ಕೂಡ ಕೆಲಸಗಳು ಪೂರ್ತಿಯಾಗಿಲ್ಲ ಎಂದು ಹೇಳಿದ್ದೀರಿ. ಸರ್ಕಾರದ ಹಣಕಾಸಿನ ಪರಿಸ್ಥಿತಿ ಯಾವಾಗ ಸರಿ ಹೋಗುತ್ತದೆ, ಇಷ್ಟು ದಿವಸದಲ್ಲಿ ಈ ಕೆಲಸಗಳನ್ನು ಪೂರ್ತಿಯಾಗಿ ಮಾಡಿಕೊಡಂತ್ತೇವೆ ಎನ್ನುವ ಭರವಸೆಯನ್ನು ಕೊಡುತ್ತೀರಾ ?